5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂಃ 01/2018

ಪಿಡಬ್ಲೂ 16
ಸಿಡಬ್ಲೂ 25

| | | |
|---|---|---|
| ಸಾಕ್ಷಿ ಹೆಸರು | - | ಮಂಜಪ್ಪ ಸಿ. |
| ತಂದೆ ಹೆಸರು | - | ಚಂದ್ರಪ್ಪ |
| ವಯಸ್ಸು | - | 61 ವರ್ಷ |
| ಉದ್ಯೋಗ | - | ನಿವೃತ್ತ ಎಎಸ್ಐ., ಸೊರಬ ಪೊಲೀಸ್ ಠಾಣೆ |
| ವಿಳಾಸಃ | - | ಸಾಗರ |

ಪ್ರಮಾಣ ವಚನ ಭೋದಿಸಿದ ದಿನಾಂಕಃ 31-07-2018.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನಾನು 2015 ರಿಂದ 2017 ರವರೆಗೆ ಎಎಸ್ಐ., ಆಗಿ ಸೊರಬ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 06-03-2016 ರಂದು ಚಾಸಃ 27 ಆದ ಮಾನ್ಯ ಸಿಪಿಐ.ರವರು ನಾನು ಮತ್ತು ಚಾಸಃ 21 ರವರನ್ನು ಇಲಾಖಾ ಜೀಪಿನಲ್ಲಿ ನಮ್ಮನ್ನು ಕರೆದುಕೊಂಡು ಹೋಗಿದ್ದು, ಸುಮಾರು ಸಂಜೆ 4.15 ಗಂಟೆಗೆ ಬಿಳುವಾಣಿ ರಸ್ತೆಯ ಬಸ್ ನಿಲ್ದಾಣದ ಬಳಿ ಇಬ್ಬರು ವ್ಯಕ್ತಿಗಳು ನಮ್ಮನ್ನು ಹಾಗೂ ನಮ್ಮ ಜೀಪನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು, ನಾವು ತಕ್ಷಣ ಅವರನ್ನು ಹಿಡಿದುಕೊಂಡು ಹೆಸರು ವಿಳಾಸ ಕೇಳಲಾಗಿ ಅವರು ಯಾವುದೇ ವಿಚಾರ ಹೇಳಿರುವುದಿಲ್ಲ. ನಂತರ ಚಾಸಃ 27 ರವರು ಅವರನ್ನು ಜೀಪಿನಲ್ಲಿ ಕೂರಿಸಿಕೊಂಡು ಠಾಣೆಗೆ ಬಂದು ಹೆಸರು ವಿಳಾಸ ಕೇಳಲಾಗಿ ನಾಗೇಶ ಬಿನ್ ಕೃಷ್ಣಪ್ಪ, ಮತ್ತು 2 ನೇ ಆರೋಪಿ ವೆಂಕಟೇಶ್ ಎಂದು ತಿಳಿಸಿದರು. ನಂತರ ಚಾಸಃ 27 ರವರು ಅವರು ನಿಯಮ ಪಾಲನೆ ಮಾಡಿ ಅವರ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿರುತ್ತಾರೆ

ಚಾಸಃ **27** ರವರು ಆ ದಿನ ಠಾಣೆಗೆ ಕರೆತಂದ ಇಬ್ಬರು ವ್ಯಕ್ತಿಗಳನ್ನು ಈ ದಿನ ನ್ಯಾಯಾಲಯದ ಮುಂದೆ ನೋಡುತ್ತಿದ್ದು ಅವರು ನ್ಯಾಯಾಲಯದ ಮುಂದಿರುವ **1** ಮತ್ತು **2** ನೇ ಆರೋಪಿತರು. ಈ ಬಗ್ಗೆ ನನ್ನ ಹೇಳಿಕೆಯನ್ನು ಚಾಸಃ **27** ರವರು ಪಡೆದುಕೊಂಡಿದ್ದಾರೆ.

ಪಾಟೀ ಸವಾಲುಃ **1** ರಿಂದ **4** ನೇ ಆರೋಪಿ ಪರ ಶ್ರೀ.ಕೆಕೆಎಸ್. ವಕೀಲರಿಂದಃ

ಆ ದಿನ ನಾವು ಠಾಣೆಯನ್ನು ಮದ್ಯಾಹ್ನ 2.00 ಗಂಟೆಗೆ ಬಿಟ್ಟಿರುತ್ತೇವೆ. ಆ ಸಮಯದಲ್ಲಿ ಚಾಸಃ 27 ಮತ್ತು 21 ಸಹ ಇದ್ದರು. ಮತ್ತು ನಮ್ಮ ಜೀಪಿನ ಚಾಲಕ ಸಹ ಇದ್ದರು. ಆ ದಿನ ನಾವು ಮಾವಲಿ, ಚೆನ್ನಾಪುರ, ಛತ್ರದ ಹಳ್ಳಿ ಮತ್ತು ಬಿಳವಾಣೆಗೆ ಹೋಗಿದ್ದೆವು. ನಾವು ಬಿಳವಾಣೆ ತಲುಪಿದಾಗ ಸಂಜೆ 4.15 ನಿಮಿಷವಾಗಿತ್ತು. ಈ ಎಲ್ಲಾ ಜಾಗಗಳು ಸೊರಬ ಪಟ್ಟಣದಿಂದ ಮೂರು ಕಿಮೀ ಒಳಗೆ ಇರುವುದಿಲ್ಲ, ನಾಲ್ಕರಿಂದ ಐದು ಕಿಮೀ ದೂರದಲ್ಲಿದೆ.

ನಾವು ಆ ದಿನ ನಾನು ಮೇಲೆ ಹೇಳಿದ ಜಾಗಗಳಿಗೆ ಹೋಗಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಆರೋಪಿತರು ಬಿಳುವಾಣಿ ಗ್ರಾಮದಲ್ಲಿ ವಾಸಮಾಡುತ್ತಿದ್ದಾರೆ ಎಂದರೆ ಸರಿ. ಆರೋಪಿತರು ರೈತಾಪಿ ಜನರು ಆಗಿದ್ದು ಜಮೀನು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಕೂಲಿ ಕೆಲಸ ಮಾಡುತ್ತಾರೆ ಎಂದು ನುಡಿದಿದ್ದಾರೆ. ನಾವು ಬಿಳುವಾಣಿಯಲ್ಲಿ ಬಸ್ ನಿಲ್ದಾಣದ ಸಮೀಪದಲ್ಲಿ ನಮ್ಮ ವಾಹನ ನಿಲ್ಲಿಸಿದ್ದೆವು. ನಾವು ಆ ದಿನ ವಾಹನ ನಿಲ್ಲಿಸಿದ ಜಾಗದ ಚಕ್ಕುಬಂದಿ ನನಗೆ ಜ್ಞಾಪಕ ಇರುತ್ತದೆ. ಪೂರ್ವ ಪಶ್ಚಿಮಕ್ಕೆ ಸೊರಬ ಮತ್ತು ಶಿರಾಳಕೊಪ್ಪ ಮುಖ್ಯರಸ್ತೆ, ದಕ್ಷಿಣಕ್ಕೆ ಬಸ್ ನಿಲ್ದಾಣ ಮತ್ತು ಉತ್ತರಕ್ಕೆ ಬಿಳುವಾಣಿ ಗ್ರಾಮಕ್ಕೆ ಹೋಗುವ ಕಚ್ಚಾ ರಸ್ತೆ. ಆ ಸಮಯದಲ್ಲಿ ನಾವು ಬಸ್ ನಿಲ್ದಾಣದಿಂದ ಸುಮಾರು 15 ರಿಂದ 20 ಅಡಿ ದೂರದಲ್ಲಿ ನಮ್ಮ ವಾಹನ ನಿಲ್ಲಿಸಿದ್ದೆವು.

ನಾನು ಮತ್ತು ಚಾಸಃ 27 ಒಂದು ವಾರದ ಮೊದಲೇ ಚಿಕ್ಕಮಗಳೂರಿನ ಒಂದು ಪ್ರಕರಣದಲ್ಲಿ ಬಿಳುವಾಣಿ ಗ್ರಾಮದ 3 ರಿಂದ 4 ಜನ ವಿಚಾರಣೆಗೆ ಕರೆಸಿಕೊಂಡಿದ್ದೆವು ಎಂದರೆ ಸುಳ್ಳು. ನಾವು ಆ ಮೂರ್ನಾಲ್ಕು ಜನರನ್ನು ನಮ್ಮ ಠಾಣೆಯಲ್ಲಿ ಕಾನೂನು ಬಾಹಿರವಾಗಿ ಬಂಧನದಲ್ಲಿಟ್ಟುಕೊಂಡು ಅವರಿಗೆ

ಹಿಂಸೆ ಮಾಡಿ ನಂತರ ಅವರನ್ನು ನಮ್ಮ ಠಾಣೆಯ ವಾಹನದಲ್ಲಿ ಕರೆದುಕೊಂಡು ಹೋಗಿ ಸದರಿ ಸ್ಥಳದಲ್ಲಿ ನಿಲ್ಲಿಸಿ ಅವರನ್ನು ದಸ್ತಗಿರಿ ಮಾಡಿದ್ದೇವೆ ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ನಾನು ಆ ದಿನ ನಾವು ಹಿಡಿದ ಆರೋಪಿತರ ಚಹರೆಯನ್ನು ಹೇಳಿರುವುದಿಲ್ಲ. ಚಾಸಃ 27 ರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರು ನಮ್ಮನ್ನು ಹಾಗೂ ನಮ್ಮ ವಾಹನವನ್ನು ನೋಡಿ ಓಡಿ ಹೋಗಿಲ್ಲ ಮತ್ತು ಅವರನ್ನು ನಾವು ಹಿಡಿದು ಯಾವುದೇ ದಸ್ತಗಿರಿ ಕ್ರಮ ಅನುಸರಿಸಿಲ್ಲ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 5 ರಿಂದ 7 ನೇ ಆರೋಪಿ ಪರ ಶ್ರೀ. ಬಿಕೆವಿ. ವಕೀಲರಿಂದಃ</u>

(ಶ್ರೀ.ಕೆ.ಕೆ.ಎಸ್. ವಕೀಲರ ಪಾಟೀ ಸವಾಲನ್ನೇ ಅನುಮೋದಿಸುತ್ತಾರೆ)

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ. ಹೇ. ಕೇ. ಸ ಇದೆ,

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ, (ಪೀಠಾಸೀನ, ಸಾಗರ)